ರಾಜ್ಯಕ್ಕೆ 6 ನೇ ರ್‍ಯಾಂಕ್ ಪಡೆದ ಗ್ರಾಮೀಣ ಪ್ರತಿಭೆ

ಕುಷ್ಟಗಿ:- ತಾಲೂಕಿನ ಗಂಗನಾಳ ಗ್ರಾಮದ ಹನಮಂತ ಮತ್ತು ಗೌರಮ್ಮ ಕಲಭಾವಿ ಅವರ ಸುಪುತ್ರ ಸಂತೋಷ ಕಲಭಾವಿ ಎಂಬ ವಿದ್ಯಾರ್ಥಿ ವಿಜಯನಗರ ಜಿಲ್ಲೆಯ ಹಂಗರಿ ಬೊಮ್ಮನಹಳ್ಳಿ ತಾಲೂಕಿನ ಕೊಟ್ಟೂರು ಕಾಲೇಜಿನಲ್ಲಿ ಕಳೆದ ಎರಡು ವರ್ಷದಿಂದ ವಿದ್ಯಾಭ್ಯಾಸ ಮಾಡುತ್ತಿದ್ದು ನನ್ನೆ ಪ್ರಕಟವಾದ ಫಲಿತಾಂಶದಲ್ಲಿ ಶೇಕಡಾ 98.36% ಅಂಕ ಗಳಿಸಿ ಮುಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದಾನೆ. ಮೂಲತ ಇವರ ತಂದೆ ಆಟೋ ಚಾಲಕರಾಗಿದ್ದು ಅದರಿಂದ ಬರುವ ಹಣದಲ್ಲಿ ಮಗನಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂಬ ಆಶೆಇಟ್ಟುಕೊಂಡ ಹಿನ್ನೆಲೆಯಲ್ಲಿ ನನ್ನೆಯ ಮಗನ ಫಲಿತಾಂಶ ದಿಂದ ಬಹಳ ಸಂತೋಷವನ್ನುಂಟುಮಾಡಿದೆ ಎಂದು ಕುಟುಂಬದವರು ಹೇಳಿದ್ದಾರೆ.ಗಂಗನಾಳ ಗ್ರಾಮದ ಗುರು ಹಿರಿಯರು ಸಹಪಾಠಿಗಳು ಈ ವಿದ್ಯಾರ್ಥಿಯ ಮನೆಗೆ ಆಗಿಮಿಸಿ ಸಿಹಿ ಹಂಚಿ ಹರ್ಷ ವ್ಯಕ್ತಪಡಿಸಿದ್ದಾರೆ.

ಹಾಸ್ಯಕೂಟದ ತಿಂಗಳ ಕಾರ್ಯಕ್ರಮ

ಪ್ರೊ. ಜಿ. ಕೆ. ಕುಲಕರ್ಣಿಯವರಿಂದ ಬಾಲ್ಯದ ಹಾಸ್ಯಪ್ರಸಂಗಗಳು

ಬೆಳಗಾವಿ 3- ನಗರದ ಹಾಸ್ಯಕೂಟ ಮತ್ತು ಕನ್ನಡ ಸಾಹಿತ್ಯ ಭವನ ವಿಶ್ವಸ್ತ ಮಂಡಳಿ ಸಂಯುಕ್ತ ಆಶ್ರಯದಲ್ಲಿ ಇದೇ ದಿ. 13 ಶನಿವಾರದಂದು ಸಾಯಂಕಾಲ 4-30 ಕ್ಕೆ ಚೆನ್ನಮ್ಮ ವೃತ್ತದ ಬಳಿಯಿರುವ ಕನ್ನಡ ಸಾಹಿತ್ಯ ಭವನದಲ್ಲಿ 'ಬಾಲ್ಯದ ಆಟ ಆ ಹುಡುಗಾಟ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.



. ಬಾಲ್ಯದಲ್ಲಿಯ ಹಾಸ್ಯ ಪ್ರಸಂಗಗಳನ್ನು ಹಂಚಿ ಕೊಳ್ಳುವ ಕಾರ್ಯಕ್ರಮ ಇದಾಗಿದ್ದು ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತ, ಲೇಖಕ ಎಲ್. ಎಸ್. ಶಾಸ್ತ್ರಿಯ ವರು ವಹಿಸ ಲಿದ್ದಾರೆ. ಪ್ರಾಂಶೊ ಜಕತ್ವವನ್ನು ನಿವೃತ್ತ ಪ್ರಾಚಾರ್ಯ, ಲೇಖಕರಾದ ಪ್ರಾ. ವ್ಹಿ. ಎನ್. ಜೋಶಿಯವರು ವಹಿಸಿಕೊಂಡಿದ್ದಾರೆ. ಸಾಹಿತ್ಯ ಭವನದ ಗೌರವ ಕಾರ್ಯದರ್ಶಿಗಳಾದ ರಾಮಚಂದ್ರ ಕಟ್ಟಿ ಉಪಸ್ಥಿತಿತರಿರುತ್ತಾರೆ. ಪ್ರಮುಖ ಭಾಷಣಕಾರರಾಗಿ ಪ್ರೊ. ಜಿ. ಕೆ. ಕುಲಕರ್ಣಿಯವರು ಆಗಮಿಸಲಿದ್ದು ಶ್ರೀಮತಿ ಭಾರತಿ ಮಠದ, ಶ್ರೀಮತಿ ರಾಜನಂದಾ ಗಾರ್ಗಿ, ಎಸ್. ವಿ. ದೀಕ್ಷೀತ, ಜಿ. ಎಸ್. ಸೋನಾರ ಬಾಲ್ಯದಲ್ಲಿಯ ಹಾಸ್ಯ ಪ್ರಸಂಗಗಳನ್ನು ಹಂಚಿಕೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಾವೆಲ್ಲರೂ ಭಾಗವಹಿಸಿ ನಕ್ಕು ನಕ್ಕು ಹಗುರಾಗುವಂತೆ ಹಾಸ್ಯಕೂಟ ಸಂಚಾಲಕ ಗುಂಡೇನಟ್ಟಿ ಮಧುಕರ ಕೇಳಿಕೊಂಡಿದ್ದಾರೆ.

ಮಹಾವೀರ ಮಲ್ಟಿಪರ್ಪಜ್ ಬ್ಯಾಂಕ್‌ಗೆ 3.25 ಕೋಟಿ ಲಾಭ-ಅಧ್ಯಕ್ಷ ನಿಲಜಗಿ

ಹುಕ್ಕೇರಿ : ರಾಜ್ಯ ಸರ್ಕಾರದ ಸಹಕಾರಿ ಇಲಾಖೆಯ ರಾಜ್ಯ ಮಟ್ಟದ ಶ್ರೇಷ್ಠ ಸಹಕಾರಿ ಪುರಸ್ಕಾರಕ್ಕೆ ಭಾಜನವಾದ ಹುಕ್ಕೇರಿಯ ಪ್ರತಿಷ್ಠಿತ ಮಹಾವೀರ ಮಲ್ಟಿಪರ್ಪಜ್ ಸೌಹಾರ್ದ ಸಹಕಾರಿ ಸಂಘವು ಬೆಳ್ಳಿ ಹಬ್ಬದ ಹೊಸ್ತಿಲಲ್ಲಿದೆ ಎಂದು ಅಧ್ಯಕ್ಷ ಮಹಾವೀರ ನಲಜಗಿ ಹೇಳಿದರು. ಪಟ್ಟಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಭಾಗದ ಬಡ, ಮಧ್ಯಮ ವರ್ಗದ ಜನರು, ಕೂಲಿಕಾರರು, ಬೀದಿ ವ್ಯಾಪಾರಸ್ಥರು, ಸಣ್ಣ ಉದ್ದಿಮೆದಾರರ ಆರ್ಥಿಕ ಮಟ್ಟ ಸುಧಾರಣೆ ಸದುದ್ದೇಶದಿಂದ ಆರಂಭವಾದ ಸಂಸ್ಥೆ ಸುದೀರ್ಘ ಪಯಣವನ್ನು ಯಶಸ್ವಿಯಾಗಿ ಪೂರೈಸಿ ಪ್ರಗತಿ ಪಥದತ್ತ ಸಾಗಿದೆ ಎಂದರು.

ಎರಡು ದಶಕಗಳ ಹಿಂದೆ ಜನ್ಮ ತಳೆದ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದಿದೆ. 25ನೇ ವರ್ಷದ ಬೆಳ್ಳಿ ಹಬ್ಬದ ಸಂಭ್ರಮ ಆಚರಿಸಲು 2025ರ ಸಪ್ಟೆಂಬರ್‌ನಲ್ಲಿ ಸಂಸ್ಥೆಯ ಆಯ್ದ ಶಾಖೆಗಳಲ್ಲಿ ಆರೋಗ್ಯ ತಪಾಸಣೆ, ಕಲಾವಿದರಿಗೆ ಗೌರವ, ಠೇವುದಾರರು ಮತ್ತು ಸಾಲಗಾರರಿಗೆ ವಿಶೇಷ ಪ್ಯಾಕೇಜ್ ಸೇರಿದಂತೆ ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಇದಕ್ಕಾಗಿ ಹಲವು ರೂಪರೇಷೆಗಳನ್ನು ಸಿದ್ಧಪಡಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಬ್ಯಾಂಕ್ ಒಟ್ಟು 14,388 ಜನ ಸದಸ್ಯರನ್ನು ಹೊಂದಿದ್ದು ಒಟ್ಟು 1030 ಕೋಟಿ ರೂ ವಹಿವಾಟು ನಡೆಸಿದೆ. 36 ಲಕ್ಷ ಶೇರು ಬಂಡವಾಳವಿದ್ದು 8 ಕೋಟಿ ಕಾಯ್ದಿಟ್ಟ ಹಾಗೂ ಇತರೆ ನಧಿಗಳಿವೆ. 275 ಕೋಟಿ ದುಡಿಯುವ ಬಂಡವಾಳವಿದ್ದು 218 ಕೋಟಿ ರೂ ಸಾಲ ವಿತರಿಸಲಾಗಿದೆ. 246 ಕೋಟಿ ಠೇವುಗಳಿದ್ದು 32 ಕೋಟಿ ಹೂಡಿಕೆಗಳಿವೆ. ಶೇ.97 ರಷ್ಟು ಸಾಲ ವಸೂಲಾತಿಯಾಗಿದ್ದು ಶೇ.25 ರಷ್ಟು ಲಾಭಾಂಶ ವಿತರಿಸಲಾಗಿದೆ. 31 ಮಾರ್ಚ್ 2024ರವರೆಗೆ 3.25 ಕೋಟಿ ರೂ ನಿವ್ವಳ ಲಾಭ ಗಳಿಸಿದೆ ಎಂದು ಅವರು ವಿವರಿಸಿದರು.

ಸಂಸ್ಥೆಯ ಐದು ಅವಧಿಯ ಆಡಳಿತ ಮಂಡಳಿ ಮತ್ತು ಪದಾಧಿಕಾರಿಗಳ ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿರುವ ಇತಿಹಾಸವಿದೆ. ಸದ್ಯ ನಾಲ್ಕು ಜಿಲ್ಲೆಗಳಲ್ಲಿ ತನ್ನ ಕಾರ್ಯಕ್ಷೇತ್ರ ವಿಸ್ತರಿಸಿಕೊಂಡಿದೆ. ಈಗಾಗಲೇ ಪ್ರಧಾನ ಕಚೇರಿ ಸೇರಿ ಒಟ್ಟು 17 ಶಾಖೆಗಳಿದ್ದು ಕಾಗವಾಡ ತಾಲೂಕು ಉಗಾರಖುರ್ದ, ಚಿಕ್ಕೋಡಿ ತಾಲೂಕು ಪಟ್ಟಣಕೋಡಿಯಲ್ಲಿ ನೂತನ ಶಾಖೆಗಳನ್ನು ತೆರೆಯಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಅವರು ಹೇಳಿದರು. ಗ್ರಾಹಕರೇ ಬ್ಯಾಂಕಿನ ಆಧಾರಸ್ತಂಭವಾಗಿದ್ದು ವಿವಿಧ ಸಾಲಗಳಿಗೆ ಕಡಿಮೆ ಬಡ್ಡಿ ದರ ಆಕರಣೆ, ಠೇವುದಾರರಿಗೆ ಆಕರ್ಷಕ ಬಡ್ಡಿ ದರ ನೀಡಲಾಗುತ್ತಿದೆ. ಹಿರಿಯ ನಾಗರಿಕರು, ಸೈನಿಕರು ಮತ್ತು ವಿಧವೆಯರಿಗೆ ವಿಶೇಷ ರಿಯಾಯಿತಿ ಘೋಷಿಸಲಾಗಿದೆ. ಸಿಬ್ಬಂದಿಗಳ ದಕ್ಷತೆಯಿಂದ ಆಧುನಿಕ ಸೌಲಭ್ಯಗಳೊಂದಿಗೆ ಗ್ರಾಹಕ-ಸದಸ್ಯರಿಗೆ ತ್ವರಿತಗತಿಯಲ್ಲಿ ಸೇವೆ ಸಲ್ಲಿಸಲಾಗುತ್ತಿದೆ ಎಂದು ಅವರು ಹೇಳಿದರು.

ಸಹಕಾರ, ಶಿಕ್ಷಣ, ಆರ್ಥಿಕ ಕ್ಷೇತ್ರದಲ್ಲಿ ಅದಮ್ಯ ಸಾಧನೆಗೈದ ಸಂಸ್ಥೆಯು ಇದೀಗ ಆರೋಗ್ಯ ಕ್ಷೇತ್ರಕ್ಕೂ ಕಾಲಿಡುವ ದಿಸೆಯಲ್ಲಿ ಹುಕ್ಕೇರಿಯಲ್ಲಿ ಮಹಾವೀರ ಮಲ್ಟಿಸ್ಪೇಶಾಲಿಟಿ ಹೈಟೆಕ್ ಆಸ್ಪತ್ರೆ ಆರಂಭಿಸಲಿದೆ. ಪ್ರಸಕ್ತ ಬರಗಾಲದಲ್ಲಿ ಜಾನುವಾರುಗಳ ಮೇವು ಡಿಪೋ ಆರಂಭಿಸುವ ಚಿಂತನೆ ನಡೆಸಲಾಗಿದೆ ಎಂದು ಅವರು ಹೇಳಿದರು.

ಉಪಾಧ್ಯಕ್ಷ ರೋಹಿತ ಚೌಗಲಾ, ನರ್ದೇಶಕರಾದ ಭರಮಪ್ಪ ಲಠ್ಠೆ, ಸುಕುಮಾರ ಖತಗಲ್ಲಿ, ಸಂಜಯ ನಲಜಗಿ, ಬಾಹುಬಲಿ ಸೊಲ್ಲಾಪುರೆ, ಪ್ರಜ್ವಲ ನಲಜಗಿ, ಕಿರಣ ಸೊಲ್ಲಾಪುರೆ, ಅಶೋಕ ಪಾಟೀಲ, ಅಕ್ಕಪ್ಪ ಖತಗಲ್ಲಿ, ಪ್ರಧಾನ ವ್ಯವಸ್ಥಾಪಕ ರಾಜೇಂದ್ರ ಪಾಟೀಲ, ಶಾಖಾ ವ್ಯವಸ್ಥಾಪಕರಾದ ಸಂತೋಷಸಿಂಗ್ ರಜಪೂತ, ಅಪ್ಪಾಸಾಹೇಬ ಚೌಗಲಾ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯಕ್ಕೆ 05ನೇ ರ್‍ಯಾಂಕ್ ಪಡೆದ ಬಿಸಿಎಂ ಹಾಸ್ಟಲ್ ವಿದ್ಯಾರ್ಥಿನಿ ಗಂಗವ್ವ ಸುಣಧೋಳಿ

ಬೆಳಗಾವಿ, ಏ.11: ಬೆಳಗಾವಿ ಜಿಲ್ಲೆಯ ವಿವಿಧ ತಾಲೂಕಿನಲದಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಸತಿ ನಲಯಗಳಲ್ಲಿನ ಒಟ್ಟು-1804 ವಿದ್ಯಾರ್ಥಿಗಳು ದ್ವಿತಿಯ ಪಿ.ಯು.ಸಿ ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ ಶೇ.90% ಕ್ಕೂ ಮೇಲ್ಪಟ್ಟು ಹೆಚ್ಚಿನ ಅಂಕ ಪಡೆದು 306, ಶೇ.80% ಕ್ಕೂ ಕ್ಕೂ ಮೇಲ್ಪಟ್ಟು ಹೆಚ್ಚಿನ ಅಂಕ ಪಡೆದು 508 ವಿದ್ಯಾರ್ಥಿಗಳು ತೇರ್ಗಡೆ ಹೊಂದುವ ಮೂಲಕ ಅತ್ಯುತ್ತಮ ಸಾಧನೆಗೈದಿರುತ್ತಾರೆ.

ಪರೀಕ್ಷೆಗೆ ಹಾಜರಾದ ಇಲಾಖೆಯ ವಿದ್ಯಾರ್ಥಿನಲಯಗಳ ಒಟ್ಟು-1804 ವಿದ್ಯಾರ್ಥಿಗಳಲ್ಲಿ 1741 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು, ಒಟ್ಟು 96.51% ರಷ್ಟು ಫಲಿತಾಂಶವನ್ನು ಪಡೆಯಲಾಗಿರುತ್ತದೆ ಎಂದು ಕು.ಶಿವಪ್ರಿಯಾ ಕಡೇಚೂರ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಗಂಗವ್ವ ಸುಣಧೋಳಿ ರಾಜ್ಯಕ್ಕೆ 5ನೇ ರ್‍ಯಾಂಕ್:

ಸವದತ್ತಿ ತಾಲೂಕಿನ ಮೆಟ್ರಿಕ್ ನಂತರದ ಬಾಲಕಿಯರ ನಲಯ ಮುನವಳ್ಳಿ ವಿದ್ಯಾರ್ಥಿನಯಾದ ಕು.ಗಂಗವ್ವ ಸುಣಧೋಳ್ಳಿ ಇವರು 600ಕ್ಕೆ 592 ಅಂಕ ಪಡೆದು ಶೇ.99% ಪ್ರತಿಶತ ಗಳಿಸಿ ರಾಜ್ಯಕ್ಕೆ ಐದನೆ ರ್‍ಯಾಂಕ್ ಪಡೆದು ಇಲಾಖೆಗೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿರುತ್ತಾರೆ.

ಅದರಂತೆ, ವಿದ್ಯಾರ್ಥಿನಲಯಗಳಲ್ಲಿದ್ದು ವ್ಯಾಸಂಗ ಮಾಡಿ ಜಿಲ್ಲೆಗೆ ಪ್ರಥಮ ಐದು ಸ್ಥಾನ ಪಡೆದ ವಿದ್ಯಾರ್ಥಿಗಳ ವಿವರ ಈ ಕೆಳಗಿನಂತಿರುತ್ತದೆ.

ಕು.ಗಂಗವ್ವ ಸುಣದೋಳ್ಳಿ (592) 99% ಮೆ.ನಂ ಬಾಲಕಿಯರ ವಿ.ನ ಮುನವಳ್ಳಿ ತಾ॥ಸವದತ್ತಿ ಕು. ಆಶ್ಮಾ ಶಾನೂರಖಾನ (588) 98% ಮೆ.ನಂ ಬಾಲಕಿಯರ ವಿ.ನ ಮಜಲಟ್ಟಿ-2 ತಾ॥ಚಿಕ್ಕೋಡಿ ಕು. ವಿಶ್ವನಾಥ ಕ ವಡ್ರಾಳಿ (586) 97.67% ಮೆ.ನಂ ಬಾಲಕರ ವಿ.ನ ಮಜಲಟ್ಟಿ ತಾ॥ಚಿಕ್ಕೋಡಿ

ಕು.ರೇಣುಕಾ ಬಸಪ್ಪ ನಾಗೋಜಿ (585) 97.50% ಮೆ.ನಂ ಬಾಲಕಿಯರ ವಿ.ನ ಮಜಲಟ್ಟಿ-1 ತಾ॥ಚಿಕ್ಕೋಡಿ ಕು.ವಿಠ್ಠಲ ಭೀ ಗಡ್ಡೇದಾರ (585) 97.50% ಮೆ.ನಂ ಬಾಲಕರ ವಿ.ನ ಮಜಲಟ್ಟಿ ತಾ॥ಚಿಕ್ಕೋಡಿ

ಹಿಂದುಳಿದ ವರ್ಗಗಳ ವಸತಿ ನಲಯದಲ್ಲಿದ್ದುಕೊಂಡು ಅತ್ಯುತ್ತಮ ಸಾಧನೆಗೈದ ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿ ನತೇಶ್ ಪಾಟೀಲ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅಭಿನಂದಿಸಿದ್ದಾರೆ ಎಂದು ಇಲಾಖೆಯ ಜಿಲ್ಲಾ ಅಧಿಕಾರಿ ಶಿವಪ್ರಿಯಾ ಕಡೇಚೂರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ. 13 ರಂದು ವೈದ್ಯಕೀಯ ಶಿಕ್ಷಣ ಕಾರ್ಯಾಗಾರ, ಉಪನ್ಯಾಸ

ಬೆಳಗಾವಿ: ಕೆಎಲ್ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯ, ಕೆಎಲ್ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರ ಇವುಗಳ ಸಂಯುಕ್ತಾಶ್ರಯದಲ್ಲಿ ಜೆಎನ್‌ಎಂಸಿ ಸೈಂಟಿಫಿಕ್ ಸೊಸಾಯಿಟಿಯ 42ನೇ ವಾರ್ಷಿಕ ಮುಂದುವರೆದ ವೈದ್ಯಕೀಯ ಶಿಕ್ಷಣ ಕಾರ್ಯಾಗಾರದಿ. 13ಹಾಗೂ 14 ಏಪ್ರೀಲ್ 2024 ರಂದು ಬೆಳಗ್ಗೆ 9 ರಿಂದ ಸಂಜೆ 6.30 ವರೆಗೆ ನಡೆಯಲಿದ್ದು, ದಿ. 13 ರಂದು ಮಧ್ಯಾಹ್ನ 2.45ಕ್ಕೆ ಉದ್ಘಾಟನೆ ನೆರವೇರಲಿದೆ. ಕೆಎಲ್ಇ ಸೆಂಟಿನರಿ ಕನ್ವೆನ್ಶನ್ (ಬಿ ಎಸ್ ಜೀರಗೆ ಸಭಾಭವನ) ಸೆಂಟರನಲ್ಲಿ ಏರ್ಪಡಿಸಲಾಗಿದೆ.

ಕಾರ್ಯಾಗಾರದ ಮುಖ್ಯ ಅತಿಥಿಗಳಾಗಿ ಕರ್ನಾಟಕ ವಿಶ್ರಾಂತ ಉಪಕುಲಪತಿಗಳ ಫೋರಮ್‌ನ ಅಧ್ಯಕ್ಷರಾದ ಡಾ. ಎಸ್ ಚಂದ್ರಶೇಖರ ಶೆಟ್ಟಿ ಆಗಮಿಸಲಿದ್ದು, ಗೌರವ ಅತಿಥಿಗಳಾಗಿ ಕೆಎಲ್ಇ ಅಕಾಡೆಮಿ ಹೈಯರ ಎಜುಕೇಶನ & ರಿಸರ್ಚನ ಉಪಕುಲಪತಿ ಡಾ. ನತಿನ ಗಂಗಾನೆ, ಕುಲಸಚಿವ ಡಾ. ಎಂ ಎಸ್ ಗಣಾಚಾರಿ, ಡಾ. ವಿ ಡಿ ಪಾಟೀಲ, ಆಸ್ಪತ್ರೆಯ ವೈದ್ಯಕೀಯ ನದೇಶಕರಾದ ಡಾ (ಕರ್ನಲ್) ಎಂ ದಯಾನಂದ, ಡಾ. ಹೆಚ್ ಬಿ ರಾಜಶೇಖರ, ಡಾ. ಎಂ ವಿ ಜಾಲಿ ಅವರು ಆಗಮಿಸಿದರೆ, ಡಾ. ಎನ್ ಎಸ್ ಮಹಾಂತಶೆಟ್ಟಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಡಾ. ರಾಜೇಶ ಪವಾರ, ಡಾ. ವಿ ಎಂ ಪಟ್ಟಣಶೆಟ್ಟಿ, ಡಾ. ಆರಿಫ್ ಮಾಲ್ದಾರ, ಡಾ. ಶಿವಾನಂದ ಬುಬನಾಳೆ, ಡಾ. ರಾಜೇಂದ್ರ ಮೆಟಗುಡಮಠ, ಡಾ. ಸ್ವಪ್ನೀಲ ಪಟ್ಟಣಶೆಟ್ಟಿ, ಡಾ. ಶಾಂತಲಾ ಹೆರಲೇಕರ, ಡಾ. ಅರವಿಂದ ತೆನಗಿ, ಡಾ. ಪ್ರಶಾಂತ ಪಾಟೀಲ ಅವರು ಉಪಸ್ಥಿತರಿರಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಡಾ. ಸ್ವಪ್ನೀಲ ಪಟ್ಟಣಶೆಟ್ಟಿ ಮೊ. 9742502467 ಇಲ್ಲಿಗೆ ಸಂಪರ್ಕಿಸಲು ಕೋರಲಾಗಿದೆ.ಡಾ. ರಾಜೇಶ ಪವಾರ, ಡಾ. ವಿ ಎಂ ಪಟ್ಟಣಶೆಟ್ಟಿ, ಡಾ. ಆರಿಫ್ ಮಾಲ್ದಾರ, ಡಾ. ಶಿವಾನಂದ ಬುಬನಾಳೆ, ಡಾ. ರಾಜೇಂದ್ರ ಮೆಟಗುಡಮಠ, ಡಾ. ಸ್ವಪ್ನೀಲ ಪಟ್ಟಣಶೆಟ್ಟಿ, ಡಾ. ಶಾಂತಲಾ ಹೆರಲೇಕರ, ಡಾ. ಅರವಿಂದ ತೆನಗಿ, ಡಾ. ಪ್ರಶಾಂತ ಪಾಟೀಲ ಅವರು ಉಪಸ್ಥಿತರಿರಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಡಾ. ಸ್ವಪ್ನೀಲ ಪಟ್ಟಣಶೆಟ್ಟಿ ಮೊ. 9742502467 ಇಲ್ಲಿಗೆ ಸಂಪರ್ಕಿಸಲು ಕೋರಲಾಗಿದೆ.

ಬೆನ್ನುಹುರಿ ಶಸ್ತ್ರಚಿಕಿತ್ಸಕರ ಭೇಟಿ

ಬೆಳಗಾವಿ: ಕೆಎಲ್ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದಲ್ಲಿ ಬೆನ್ನುಹುರಿ ತಪಾಸಣೆಯನ್ನು ಶನಿವಾರ ದಿ. 10 ಏಪ್ರೀಲ್ 2024 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಏರ್ಪಡಿಸಲಾಗಿದೆ. ಪುಣೆಯ ಬೆನ್ನುಹುರಿ ಶಸ್ತ್ರಚಿಕಿತ್ಸಕರಾದ ಡಾ. ಸಂಜಯ ಪಾಟೀಲ ಅವರು ಆಗಮಿಸಲಿದ್ದು, ಬೆನ್ನುಹುರಿ ತೊಂದರೆಯಿಂದ ಬಳಲುತ್ತಿರುವವರನ್ನು ತಪಾಸಿಸಿ ಸೂಕ್ತ ಸಲಹೆ ಮತ್ತು ಶಸ್ತ್ರಚಿಕಿತ್ಸೆ ಕುರಿತು ಪರಿಹಾರ ತಿಳಿಸಲಿದ್ದಾರೆ.

ಈ ಭೇಟಿಯ ಸದಪಯೋಗವನ್ನು ಪಡೆದುಕೊಳ್ಳುವಂತೆ ಆಸ್ಪತ್ರೆಯ ವೈದ್ಯಕೀಯ ನರ್ದೇಶಕರು ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕೆಎಲ್ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರದ ಜನಸಂಪರ್ಕ ವಿಭಾಗ ಅಥವಾ ದೂ. 2473777, (ವಿಸ್ತೀರ್ಣ: 1116 \ 1117), ಇಲ್ಲಿಗೆ ಸಂಪರ್ಕಿಸಲು ಅರಿಕೆ. ಈ ಭೇಟಿಯ ಸದಪಯೋಗವನ್ನು ಪಡೆದುಕೊಳ್ಳುವಂತೆ ಆಸ್ಪತ್ರೆಯ ವೈದ್ಯಕೀಯ ನರ್ದೇಶಕರು ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಕೆಎಲ್ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರದ ಜನಸಂಪರ್ಕ ವಿಭಾಗ ಅಥವಾ ದೂ. 2473777, (ವಿಸ್ತೀರ್ಣ: 1116 \ 1117), ಇಲ್ಲಿಗೆ ಸಂಪರ್ಕಿಸಲು ಅರಿಕೆ.

ಅಲ್ಲಮ ಅಂದರೆ ಬೆಳಕಿನ ಮೂಲ ಸತ್ಯವನ್ನು ಅರಿತವರು : ಮಾತೆ ವಾಗ್ದೇವಿ ತಾಯಿ

ಬೆಳಗಾವಿ; ಅಲ್ಲಮ ಅಂದರೆ ಬೆಳಕಿನ ಮೂಲ ಸತ್ಯವನ್ನು ಅರಿತವರು ಉತ್ಸಾಹದ ಬದುಕನ್ನು ಬದುಕಲು ಕಲಿಸಿ,ನಮ್ಮ ಕಣ್ಣೆದುರಿಗೆ ಇಲ್ಲದಿದ್ದರೂ ಸದಾ ಕಾಲವೂ ನಮ್ಮ ಸ್ಮೃತಿ ಪಟಲದ ಮುಂದೆ ಗೋಚರಿಸುವ ಶರಣರ,ಸಂತರ, ದಾರ್ಶನಿಕರ, ಮಹಾಂತರ ಹಾಗೂ ಯುಗ ಪುರುಷರ ಜಯಂತಿಯನ್ನು ಸಾಮಾನ್ಯವಾಗಿ ಆಚರಿಸುತ್ತ ಬರಲಾಗಿದೆ. ಜಗದ ಜನರಿಗೆ ಜೀವನದ ಜಂಜಡದಿಂದ ಹೊರಬಂದು ನೆಮ್ಮದಿಯಿಂದ ಜೀವನ ಸಾಗಿಸುವ ಸನ್ಮಾರ್ಗವನ್ನು ತೋರಿಸಿಕೊಟ್ಟ ಹನ್ನೆರಡನೆಯ ಶತಮಾನದ ಶರಣರ ಸಾಲಿನಲ್ಲಿ ಅಗ್ರಸ್ಥಾನದಲ್ಲಿರುವ ಅನುಭವ ಮಂಟಪದ ಅದ್ಯಕ್ಷರಾದ ಅಲ್ಲಮಪ್ರಭು ದೇವರು. ಅಲ್ಲಮ ಅಂದರೆ ಬೆಳಕಿನ ಮೂಲ ಸತ್ಯವನ್ನು ಅರಿತವರು ಅಂತ ಅರ್ಥ. ಸದೈವ ಜಾಗೃತಿ ಜೀವನಕ್ಕೆ ಕರೆಕೊಟ್ಟು ಜೀವನವನ್ನು ಜಯಸಿದವರು. ನಿತ್ಯ ನೂತನವಾದದ್ದು ಸತ್ಯವೇ ಅದರ ಚಿದಂಶವು ನಾವು ಅನ್ನುವದನ್ನು ಅರಿತು ಬದುಕಬೇಕೆಂಬುದನ್ನ ಕಲಿಸಿದವರು, ಶೂನ್ಯ ಪೀಠಕ್ಕೆ ಘನತೆಯನ್ನು ತಂದು ಕೊಟ್ಟು,ಹಲವಾರು ಬೆಡಗಿನ ವಚನಗಳ ರಚಿಸಿ ಮಾನವಕುಲಕ್ಕೆ ಬೆಳಕನ್ನು ತೋರಿದವರು ಅಲ್ಲಮಪ್ರಭು ದೇವರು. ಅವರು ತೋರಿಸಿದ ಬೆಳಕಿನ ಮಾರ್ಗದಲ್ಲಿ ಬಾಳಿ ಬದುಕಿ ನಮ್ಮನಮ್ಮ ಬದುಕನ್ನು ಹಸನ